

ಟ್ರೋಫಿ ಎತ್ತಿ ಹಿಡಿದು ಸಹ ಆಟಗಾರರೊಂದಿಗೆ ಸಂಭ್ರಮಿಸುತ್ತಿರುವ ರಜತ್ ಪಾಟಿದಾರ್



ಯಶಸ್ಸಿನ ಮುತ್ತು! ಶಿಷ್ಯ ಆದಿತ್ಯ ಶ್ರೀವಾಸ್ತವ ಮತ್ತು ಗುರು ಚಂದ್ರಕಾಂತ ಪಂಡಿತ್‌ರ ಸಂಭ್ರಮದ ಕ್ಷಣ

ಎತ್ತಿಹಿಡಿಯಲು ಪ್ರೇರಣೆಯಾಗಿದ್ದನ್ನಂತೂ ಯಾರೂ ಅಲ್ಲಗಳೆಯಲಾರರು.

ಚಂದ್ರಕಾಂತ್ ಪಂಡಿತ್ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳನ್ನು ಹೆಚ್ಚೇನೂ ಆಡಿದವರಲ್ಲ. ಅವರು ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಆಗಿ ತಣ್ಣಗಿನ ಸ್ವಭಾವ ತುಳುಕಿಸಿ ಹೋದವರು. ದೇಶಿ ಕ್ರಿಕೆಟ್‌ನಲ್ಲಿ ಮಾತ್ರ ಅಪಾರ ಅನುಭವಿ. ಅವರು ಮುಂಬೈ, ವಿದರ್ಭ ತಂಡಗಳನ್ನು ತಮ್ಮದೇ ತಂತ್ರಗಳಿಂದ ರೂಪಿಸಿ, ಈ ಹಿಂದೆ ರಣಜಿ ಪಂದ್ಯಗಳಲ್ಲಿ ಸೊಗಸಾದ ಪ್ರದರ್ಶನ ನೀಡಲು ಕಾರಣವಾಗಿದ್ದನ್ನು ಕಂಡಿದ್ದೇವೆ. 2017–18, 2018–19ರ ಋತುವಿನಲ್ಲಿ ವಿದರ್ಭ ಸತತವಾಗಿ ಎರಡು ಸಲ ರಣಜಿ ಕಪ್ ಎತ್ತಿಹಿಡಿದಾಗ ಇದೇ ಚಂದ್ರಕಾಂತ್ ಪಂಡಿತ್ ಕೋಚ್ ಆಗಿದ್ದರು.

ಅವರ ಕಣ್ಣು, ಮನಸ್ಸು ಹೇಗೆಲ್ಲ ಕೆಲಸ ಮಾಡುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆ ಇದೆ. ಅಕ್ಷತ್ ರಘುವಂಶಿ ಈ ಸಲ ಮಧ್ಯಪ್ರದೇಶ ತಂಡದಲ್ಲಿ ಆಡಿದ ಯುವ ಪ್ರತಿಭೆ. ಅವರು 19 ವರ್ಷದೊಳಗಿನವರ ತಂಡದಲ್ಲಿ ಆಡುತ್ತಿದ್ದ ಪಂದ್ಯವೊಂದರಲ್ಲಿ ಚಂದ್ರಕಾಂತ್ ಪಂಡಿತ್ ಅಂಪೈರ್ ಆಗಿದ್ದರು. ಅಕ್ಷತ್‌ಗೆ ಬೌಲ್ ಮಾಡಿದ ಎದುರಾಳಿ ಬೌಲರ್ ಎಲ್‌ಬಿಡಬ್ಲ್ಯು ಔಟ್‌ಗೆ ಮನವಿ ಮಾಡಿದರು. ಆಗ ಪಂಡಿತ್ ಅದು ನಾಟ್‌ಔಟ್ ಎಂದು ತೀರ್ಪಿತ್ತಿದ್ದರು. ಆ ಬೌಲರ್ ದಿನದಾಟದ ನಂತರ ಪದೇ ಪದೇ ಆ ಎಸೆತವನ್ನು ಸೂಕ್ಷ್ಮವಾಗಿ ಗಮನಿಸಿದ. ಅಕ್ಷತ್ ತಮ್ಮ ಫುಟ್‌ವರ್ಕ್‌ನಿಂದಲೇ ಎಲ್‌ಬಿ ಬಲೆಯಿಂದ ಪಾರಾಗಿದ್ದುದು ಅವರ ಅರಿವಿಗೆ ಬಂತು. ಬರಿಗಣ್ಣಿನಿಂದಲೇ ಪಂಡಿತ್ ಅದನ್ನು ಗ್ರಹಿಸಿದ್ದುದನ್ನು ನೋಡಿ ಆ ಬೌಲರ್‌ಗೂ ಆಶ್ಚರ್ಯವಾಗಿತ್ತು. ಅಕ್ಷತ್ ಆಟದ ವೈಖರಿಯನ್ನು ಆಗಲೇ ಗಮನಿಸಿದ್ದ ಪಂಡಿತ್ ಈಗ ಹುಡುಗನನ್ನು ಬೆಳೆಸುತ್ತಿದ್ದಾರೆ.

ಮಧ್ಯಪ್ರದೇಶದ ರಜತ್ ಪಾಟಿದಾರ್ ಈ ಋತುವಿನಲ್ಲಿ 658 ರನ್ ಕಲೆಹಾಕಿದರು. 82.25ರ ಅವರ ಸರಾಸರಿ ಗಮನಾರ್ಹ. ಯಶ್ ದುಬೆ 614 ರನ್ ಕಲೆಹಾಕಿದರೆ, ಶುಭಂ ಶರ್ಮ 608 ರನ್‌ಗಳನ್ನು ಸೇರಿಸಿದರು. ಕರ್ನಾಟಕದ ಕೆ.ವಿ. ಸಿದ್ಧಾರ್ಥ್ ಹೊರತುಪಡಿಸಿದರೆ ಬೇರೆ ಯಾವ ಬ್ಯಾಟ್ಸ್‌ಮನ್ ಕೂಡ ಈ ಸಲದ ರಣಜಿ ಋತುವಿನಲ್ಲಿ 400 ರನ್‌ಗಳ ಗಡಿ ದಾಟಲಿಲ್ಲ. ಮುಂಬೈನ ಸರ್ಫರಾಜ್ ಖಾನ್ 982 ರನ್‌ಗಳನ್ನು ರಣಜಿ ಋತುವಿನಲ್ಲಿ ಗಳಿಸಿದ್ದು ಮುಂಬೈನ ಬ್ಯಾಟ್ಸ್‌ಮನ್‌ಶಿಪ್ ಎಷ್ಟು ಔನ್ನತ್ಯದಲ್ಲಿದೆ ಎನ್ನುವುದಕ್ಕೆ ಸಾಕ್ಷಿ.

ಮುಂಬೈನ ಶಂಸ್ ಮುಲಾನಿ ಎಡಗೈ ನಿಧಾನಗತಿಯ ಬೌಲಿಂಗ್ 45 ವಿಕೆಟ್‌ಗಳನ್ನು ಉದುರಿಸಿತು. ಅದೇ ರೀತಿ ಎಡಗೈ ನಿಧಾನಗತಿಯ ಬೌಲರ್ ಆದ ಮಧ್ಯಪ್ರದೇಶದ ಕುಮಾರ್ ಕಾರ್ತಿಕೇಯ 32 ವಿಕೆಟ್ ಕಿತ್ತುಕೊಟ್ಟರು. ಗೌರವ್ ಯಾದವ್ ಕೂಡ 23 ವಿಕೆಟ್ ದಕ್ಕಿಸಿಕೊಟ್ಟರು. ಸೆಮಿಫೈನಲ್‌ನಲ್ಲಿ ಬಂಗಾಳ ವಿರುದ್ಧ ಎರಡನೇ ಇನಿಂಗ್ಸ್‌ನಲ್ಲಿ ನಾಯಕ ಆದಿತ್ಯ ಶ್ರೀವಾಸ್ತವ 82 ರನ್ ಹೊಡೆಯದೇ ಇದ್ದರೆ ಹಾಗೂ ಕೊನೆಯ ದಿನದಾಟದಲ್ಲಿ ಚಕಚಕನೆ ಕುಮಾರ್ ಕಾರ್ತಿಕೇಯ ಮೂರು ವಿಕೆಟ್‌ಗಳನ್ನು ಕೀಳದಿದ್ದರೆ ಮಧ್ಯಪ್ರದೇಶದ ಆತ್ಮಬಲ ಏನಾಗಿರುತ್ತಿತ್ತೋ?

2015ರಲ್ಲಿ ದಿಗ್ಗಜ ಆಟಗಾರರ ಮಧ್ಯೆ ಸಣ್ಣ ಹುಡುಗನಂತೆ ನಿಂತಿದ್ದ ಆದಿತ್ಯ ಈಗ ಹೊಳೆಯುವ ನಾಯಕನಾಗಿ ಬದಲಾಗಿದ್ದಾರೆ. ಅವರನ್ನು ಮಾಗಿಸಿದ ಚಂದ್ರಕಾಂತ್ ಪಂಡಿತ್ ದೀರ್ಘಾವಧಿಯ ಕನಸೊಂದು ನನಸಾದ ಖುಷಿಯಲ್ಲಿದ್ದಾರೆ. ವೆಂಕಟೇಶ್ ಅಯ್ಯರ್ ಆಡದೇಹೋದದ್ದಕ್ಕೆ ಅವಕಾಶ ಸಿಕ್ಕ ಖುಷಿಯಲ್ಲಿದ್ದ ಅಕ್ಷತ್ ಕೂಡ ಐತಿಹಾಸಿಕ ಕ್ಷಣವೊಂದರ ಭಾಗವಾದರು. ಹೊಸ ಚಿಗುರು, ಹಳೆ ಬೇರು ಹೊಳೆಯಬೇಕಾದದ್ದೇ ಹೀಗೆ. ಐಪಿಎಲ್‌ನಲ್ಲಿ ರಜತ್ ಪಾಟಿದಾರ್ ಒಂದು ಶತಕವನ್ನು ಆರ್‌ಸಿಬಿ ತಂಡಕ್ಕೆ ಹೊಡೆದುಕೊಟ್ಟದ್ದು ಎಷ್ಟೊಂದು ಜನರಿಗೆ ನೆನಪಿದೆ. ಹಾಗೆಯೇ ಸಂಯಮ ಕೇಳುವ ರಣಜಿ ವಿಜಯವೂ ನೆನಪಿನಲ್ಲಿರಬೇಕು.

ಪ್ರತಿಕ್ರಿಯಿಸಿ: feedback@sudha.co.in